## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಸಿಸಿ. 175/2025

**ಫಿರ್ಯಾಧಿ ಃ ಕೆ ಆರ್ ಸಾಗರ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿಗಳು ಃ ಶೃತಿ ಮತ್ತು ಇತರರು**

## ದೋಷಾರೋಪಣೆ

**ಶ್ರೀ ಆರ್. ಮಹೇಶ., ಬಿ.ಎ.ಎಲ್., ಎಲ್.ಎಲ್.ಬಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ, ಆದ ನಾನು ಆರೋಪಿಯಾದ**

1. **ಶೃತಿ ಕೋಂ ದೇವರಾಜು, 34 ವರ್ಷ.**
2. **ಮೋಹನ ಬಿನ್ ಮನೋಹರ ಬಿ ಟಿ, 30 ವರ್ಷ.**
3. **ದೇವರಾಜು ಬಿನ್ ಗೌಡಪ್ಪ, 36 ವರ್ಷ, ವಾಸಃ ಮಜ್ಜಿಗೆಪುರ ಗ್ರಾಮ, ಶ್ರೀರಂಗಪಟ್ಟಣ ತಾಲ್ಲುಕು, ಮಂಡ್ಯ ಜಿಲ್ಲೆ.**

**ಆರೋಪಿ 1 ಮತ್ತು 2 ರವರು ವಾಸಃ ಬನ್ನಂಗಾಡಿ ಗ್ರಾಮ, ಪಾಂಡವಪುರ ತಾಃ, ಮಂಡ್ಯ ಜಿಲ್ಲೆ**

**ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ**

ದಿಃ 11.12.2024 ರಂದು ಮದ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ಕೆ ಆರ್ ಸಾಗರ ಪೊಲೀಸ್ ಠಾಣಾ ಸರಹದ್ದಿನ ಪಾಂಡವಪುರ ತಾಲ್ಲೂಕು, ಚಿನಕುರಳಿ ಹೋಬಳಿ, ಬನ್ನಂಗಾಡಿ ಗ್ರಾಮದಲ್ಲಿ ಸಾಕ್ಷಿ.1 ರಿಂದ 3 ರವರು ತಮ್ಮ ಜಮೀನಿನ ಬಳಿ ಇದ್ದಾಗ, 2 ನೇ ಆರೋಪಿಯಾದ ನೀವು ಆ ಜಮೀನಿನ ಬಳಿ ಬಂದಾಗ ಸಾಕ್ಷಿ.1 ರವರು ಯಾಕೆ ಫಾರೆಸ್ಟ್ ಇಲಾಖೆಗೆ ನಿಮ್ಮ ತಂದೆ ದೂರು ಕೊಟ್ಟಿದ್ದಾರೆ ಎಂದು ಕೇಳಿದ ತಕ್ಷಣ 2 ನೇ ಆರೋಪಿಯಾದ ನೀವು ಅಲ್ಲಿಂದ ಹೊರಟು ಹೋಗಿದ್ದು, ನಂತರ 1 ಮತ್ತು 3 ನೇ ಆರೋಪಿಗಳಾದ ನೀವುಗಳು ಅಲ್ಲಿ ಬಂದಾಗ ಸಾಕ್ಷಿ.1 ರವರು 1 ನೇ ಆರೋಪಿಯಾದ

ನಿಮಗೆ ಯಾಕೆ ಈ ರೀತಿ ಕಂಪ್ಲೇಂಟ್ ಕೊಟ್ಟು ತೊಂದರೆ ಕೊಡುತ್ತಿದ್ದೀರಾ, ನಿಮ್ಮ ಅಪ್ಪ ಎಲ್ಲಿಯೂ ಅಕ್ರಮ ಮಾಡಿಲ್ಲವೆ ಎಂದು ಕೇಳಿದ್ದಕ್ಕೆ 1 ನೇ ಆರೋಪಿಯಾದ ನೀವು ಸಾಕ್ಷಿ.1 ರವರ ಕತ್ತಿನ ಪಟ್ಟಿ ಹಿಡಿದುಕೊಂಡು ಶರ್ಟ್ ಗುಂಡಿ ಕಿತ್ತು ಹಾಕಿ **ಭಾರತೀಯ ನ್ಯಾಯ ಸಂಹಿತೆ ಕಲಂ 115(2) ರಡಿ**ಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಮೇಲೆ ಹೇಳಿದ ವಿಚಾರವಾಗಿ ಜಗಳ ತೆಗೆದು 1 ನೇ ಆರೋಪಿಯಾದ ನೀವು ಸಾಕ್ಷಿ.1 ರವರನ್ನು ಉದ್ದೇಶಿಸಿ ನಿಮ್ಮಪ್ಪಂದರಲ್ಲಿ ಮಾಡುತ್ತಿಲ್ಲ ಮಗನೇ ಎಂದು ಬೈದು **ಭಾರತೀಯ ನ್ಯಾಯ ಸಂಹಿತೆ ಕಲಂ 352 ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಮೇಲೆ ಹೇಳಿದ ವಿಚಾರವಾಗಿ ಜಗಳ ತೆಗೆದು ಸಾಕ್ಷಿ.1 ರವರು ತನ್ನ ಜಮೀನಿನ ಬಳಿ ಇದ್ದಾಗ 1 ರಿಂದ 3 ನೇ ಆರೋಪಿಗಳಾದ ನೀವುಗಳು ನಂತರ ಪುನಃ ಅದೇ ದಿನ ಮದಾಹ್ನ 1.30 ಗಂಟೆ ಸಮಯದಲ್ಲಿ ಸಾಕ್ಷಿ.1 ರವರ ಹತ್ತಿರ ಗಲಾಟೆ ಮಾಡುತ್ತಿದ್ದು, ಆಗ ಸಾಕ್ಷಿ.4 ರವರು ಜಗಳ ಬಿಡಿಸಲು ಹೋದಾಗ 3 ನೇ ಆರೋಪಿ ದೊಣ್ಣೆಯಿಂದ ಸಾಕ್ಷಿ.4 ರವರ ಎಡಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ **ಭಾರತೀಯ ನ್ಯಾಯ ಸಂಹಿತೆ ಕಲಂ 118(1) ಸಹ ವಾಚಕ 3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೇಲೆ ಹೇಳಿದ ವಿಚಾರವಾಗಿ ಜಗಳ ತೆಗೆದು 3 ನೇ ಆರೋಪಿಯಾದ ನೀವು ಸಾಕ್ಷಿ.1 ರಿಂದ 4 ರವರನ್ನು ಈ ಭೂಮಿ ನಮಗೆ ಬೇಡ, ಬನ್ನಿ ನೀವು ಮಜ್ಜಿಗೆಪುರಕ್ಕೆ ನಿಮಗೆ ಗತಿಕಾಣಿಸುತ್ತೇನೆಂದು ಕೊಲೆ ಬೆದರಿಕೆ ಹಾಕಿ **ಭಾರತೀಯ ನ್ಯಾಯ ಸಂಹಿತೆ ಕಲಂ 351(2)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

**(ಮೇಲಿನ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರ ಉತ್ತರವನ್ನು ದಾಖಲಿಸಿದೆ ಎಂದು ದೃಢೀಕರಿಸಿದೆ.)**

**ಪ್ರ 1 ಮೇಲೆ ಹೇಳಿದ ದೋಷಾರೋಪಣೆ ಸಾರಾಂಶ ನಿಮಗೆ ಅರ್ಥವಾಯಿತೆ?**

**ಉಃ** 1.

2.

3.

**ಪ್ರ 2 ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಪ್ರತಿರಕ್ಷೆ ಇದೆಯೆ ?**

**ಉಃ** 1.

2.

3.

**(ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಓದಿ ಹೇಳಿ, ಅವರು ಸರಿಯೆಂದು ಒಪ್ಪಿದ ಮೇರೆಗೆ ಅವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.)**

**ದಿನಾಂಕಃ** 10.11.2025.

**ಸ್ಥಳ ಃ ಪಾಂಡವಪುರ**

**(ಆರ್.ಮಹೇಶ)**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ. ಪಾಂಡವಪುರ.**